

ಕೆ.ಆರ್. ನಗರ ತಾಲ್ಲೂಕು, ಹಳೆಯೂರಿನ ಎಚ್.ಎಸ್. ಕೃಷ್ಣಸ್ವಾಮಿ ಬದುಕಿನುದ್ದಕ್ಕೂ ಕನ್ನಡವನ್ನು ಹೊಸತಾಗಿಸುತ್ತ ಸಾಗಿದವರು. ಅಂಕಣ ಬರಹಗಳ ಘನತೆ ಹೆಚ್ಚಿಸಿದ, ವ್ಯಕ್ತಿಚಿತ್ರಗಳಿಗೊಂದು ವ್ಯಕ್ತಿತ್ವ ತಂದುಕೊಟ್ಟ ಎಚ್ಚೆಸ್ಕೆ, ಬ್ಯಾಂಕಿಂಗ್ ಕ್ಷೇತ್ರದಲ್ಲೂ ಕನ್ನಡ ಡಿಂಡಿಮ ನುಡಿಸಿದರು. 'ಸುಧಾ' ಜೊತೆಗಂತೂ ಅವರದು ದಶಕಗಳ ನಂಟು.

■ ಎಂ.ಎಸ್. ನರಸಿಂಹಮೂರ್ತಿ

# ಎಚ್ಚೆಸ್ಕೆ
## ಮೂರಕ್ಷರಗಳ ಮೋಡಿ

**1985**ರ ಏಪ್ರಿಲ್ ತಿಂಗಳು. ಶೃಂಗೇರಿಯಲ್ಲಿ ಬ್ಯಾಂಕಿಂಗ್ ಕಮ್ಮಟ ವ್ಯವಸ್ಥೆಯಾಗಿತ್ತು. ಬ್ಯಾಂಕಿಂಗ್‌ಗೆ ಸಂಬಂಧಿಸಿದ ಇಂಗ್ಲಿಷ್ ಲೇಖನಗಳ ಕನ್ನಡಾನುವಾದ ಹಾಗೂ ಕನ್ನಡದಲ್ಲಿ ಬ್ಯಾಂಕಿಂಗ್ ಪದಗಳ ಸೃಷ್ಟಿ ಆ ಶಿಬಿರಗಳ ಉದ್ದೇಶ. ಭಾರತೀಯ ಸ್ಟೇಟ್ ಬ್ಯಾಂಕಿನ 'ಸಮನ್ವಯ ಸಮಿತಿ' ಆರು ತಿಂಗಳಿಗೊಮ್ಮೆ ಆರು ದಿನಗಳ ಅವಧಿಯ ಕಮ್ಮಟಗಳನ್ನು ನಾಡಿನಾದ್ಯಂತ ವ್ಯವಸ್ಥೆ ಮಾಡುತ್ತಿತ್ತು. ಶಿವನಸಮುದ್ರ, ಬಾದಾಮಿ, ಮಡಿಕೇರಿ, ಶಿರಸಿ ಮೊದಲಾದ 27 ಸ್ಥಳಗಳಲ್ಲಿ ನಡೆದ ಈ ಎಲ್ಲ ಕಮ್ಮಟಗಳ ನಿರ್ದೇಶಕ ಪ್ರೊ. ಎಚ್ಚೆಸ್ಕೆ.

ಶೃಂಗೇರಿಯಲ್ಲಿ ಕಮ್ಮಟ ನಡೆಯುತ್ತಿದ್ದಾಗ ಒಂದು ರಾತ್ರಿ ಚಂದ್ರ ಗ್ರಹಣ. ಕಮ್ಮಟ ಕಲಾಪ ಮುಗಿಸಿ, ಗ್ರಹಣ ಬಿಟ್ಟ ಮೇಲೆ ಶೃಂಗೇರಿಯ ಹೊಳೆಯಲ್ಲಿ ಬೆಳದಿಂಗಳ ಸ್ನಾನ. ಈಜುವುದನ್ನು

**ಎಚ್ಚೆಸ್ಕೆ ಜನ್ಮಶತಮಾನೋತ್ಸವ**
**ಆಪ್ತ ನೆನಪು**
**ಆಗಸ್ಟ್ 26, 1920**

ಎಚ್ಚೆಸ್ಕೆ ನನಗೆ ತುಂಗಾ ನದಿಯಲ್ಲಿ ಕಲಿಸಿದರು. ಸ್ನಾನ ಮುಗಿಸಿ ಬಂದ ನಂತರ ನನಗೋ ಹಸಿವು. ಆದರೆ ಎಚ್ಚೆಸ್ಕೆಯವರು ಒಂದು ಲೋಟ ಹಾಲು ಕುಡಿದು ಮಲಗಿದರು. ಪ್ರವಾಸದಲ್ಲಿದ್ದಾಗ ಅವರು ರಾತ್ರಿ ವೇಳೆ ಹಾಲು ಅಥವಾ ಹಣ್ಣು ಮಾತ್ರ ಸ್ವೀಕರಿಸುತ್ತಿದ್ದರು. ಬೆಳಿಗ್ಗೆ 5 ಗಂಟೆಗೆಲ್ಲಾ ನನ್ನನ್ನು ಎಬ್ಬಿಸಿ 2 ಕಿ.ಮೀ. ವಾಕಿಂಗ್‌ಗೆ ಕರೆದುಕೊಂಡು ಹೋಗುತ್ತಿದ್ದರು. ಬೆಳಿಗ್ಗೆ ಒಂದು ಲೋಟ ತಣ್ಣೀರಿಗೆ ಒಂದು ನಿಂಬೆ ಹೋಳಿನ ರಸವನ್ನು ಹಾಕಿದರೆ ಅದು ಎರಡು ಕಿ.ಮೀ. ನಡೆಸುವಷ್ಟು ಇಂಧನವಾಗುತ್ತದೆ ಎನ್ನುತ್ತಿದ್ದರು. ವಾಕಿಂಗ್ ಮುಗಿಸಿ ಬಂದ ಮೇಲೆ ಯೋಗ, ಪ್ರಾಣಾಯಾಮಗಳನ್ನು ಮಾಡುತ್ತಿದ್ದ ಅವರ ದೈನಂದಿನ ಶಿಸ್ತು ಅಚ್ಚರಿ ಮೂಡಿಸುತ್ತಿತ್ತು.

1965ರ ಜನವರಿಯಲ್ಲಿ ಪ್ರಾರಂಭವಾದ 'ಸುಧಾ' ಮೊದಲ ಸಂಚಿಕೆಯೆಂದರೇ 'ವಾರದ ವ್ಯಕ್ತಿ', 'ವಾರದಿಂದ ವಾರಕ್ಕೆ' ಅಂಕಣಗಳನ್ನು ಪ್ರೊ. ಎಚ್ಚೆಸ್ಕೆ ಮೂರು ದಶಕಗಳ ಕಾಲ ಬರೆದರು. ಅವರ ನಿರಂತರ ಬರವಣಿಗೆಗೆ ಸಾಂಸಾರಿಕ ಅಡಚಣೆಗಳು ಅಡ್ಡಿಯಾಗಲಿಲ್ಲ. 'ವಾರದ ವ್ಯಕ್ತಿ'ಯಲ್ಲಿ ಕ್ರಿಯಾಪದಗಳೇ ಇಲ್ಲದೆ ವಾಕ್ಯರಚನೆ. ಪದಗಳನ್ನು ಉಳಿಸಬೇಕು, ಅನಗತ್ಯವಾಗಿ ಒಂದು ಪದವನ್ನೂ ಹೆಚ್ಚಾಗಿ ಬಳಸಬಾರದು ಎಂಬ ನಿಲುವು.

### ಕನ್ನಡದ 'ಜಾಣ', ಕನ್ನಡವೇ ಪ್ರಾಣ

ಕೃಷ್ಣರಾಜನಗರ ತಾಲ್ಲೂಕು ಹಳೆಯೂರಿನ ಎಚ್.ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ ಅಂದ್ರೆ ಯಾರಿಗೂ ತಿಳಿಯುವುದಿಲ್ಲ. ಆದರೆ 'ಎಚ್ಚೆಸ್ಕೆ' ಎಂಬ ಮೂರಕ್ಷರದ ಮೋಡಿ ಪದ ಎಲ್ಲರಿಗೂ ಗೊತ್ತು. ಹುಟ್ಟಿದ್ದು ಆಗಸ್ಟ್ 26, 1920.